

## ಕೂಡ್ಲು ತೀರ್ಥ ಜಲಧಾರೆ

(6ನೇ ಪುಟದಿಂದ)

ಎತ್ತರದಿಂದ ಕಲ್ಲಿನ ಬಂಡೆಗಳೆಡೆಯಲ್ಲಿ ಹರಿಯುತ್ತಾ ಈ ಸ್ಥಳದಲ್ಲಿ ಕೂಡಿ ಮೇಲಿಂದ ಕೆಳಗೆ ಧುಮುಕುತ್ತದೆ. ಪಂಚ ಕಿರುತೊರೆಗಳು ಕೂಡಿ ಧುಮುಕುತ್ತಿರುವ ನೀರಿನ ಧಾರೆ, ಆಸ್ತಿಕರ ಬಾಯಿಯಲ್ಲಿ ಕೂಡ್ಲು ತೀರ್ಥವಾಯಿತು. ಮುಂದೆ ಇದೇ ತೊರೆಗೆ ಹಲವು ಕಿರು ತೊರೆಗಳು ಸೇರಿ ಸೀತಾ ನದಿಯಾಗಿ ಹರಿಯುತ್ತದೆ.

ಇದೀಗ ಸೋಮೇಶ್ವರ ರಕ್ಷಿತಾರಣ್ಯ. ಕೂಡ್ಲು ತೀರ್ಥ ವರ್ಷದ ಎಲ್ಲ ಋತುವಿನಲ್ಲೂ ಹರಿಯುತ್ತದೆ. ಪ್ರವೇಶ ಶುಲ್ಕ ರೂ 50. ಮಳೆಗಾಲದ ಮೂರು ತಿಂಗಳು ಮಾತ್ರ ಇಲ್ಲಿಗೆ ಪ್ರವೇಶವಿಲ್ಲ. ಕಲ್ಲು ಬಂಡೆಗಳ ಎಡೆಯಿಂದ ಹರಿಯುವ ನೀರು ಈ ಕೂಡ್ಲು ಎಂಬ ಸ್ಥಳದಲ್ಲಿ ಸಣ್ಣ ಸರೋವರವಾಗುತ್ತದೆ. ಈ ಸರೋವರದೊಳಗೆ ಅಲ್ಲಲ್ಲಿ ಕಲ್ಲು ಬಂಡೆಗಳಿವೆ. ಸೊಂಟದ ತನಕವಷ್ಟೇ ನೀರು ಬರುವ ಕಾರಣ ಅಬಾಲವೃದ್ಧರಿಗೂ, ಮಹಿಳೆಯರಿಗೂ ಇಲ್ಲಿನ ಸ್ನಾನಕ್ಕೆ ಭಯ ಪಡಬೇಕಾಗಿಲ್ಲ. ಸರೋವರದ ಸನಿಹ ಕಲ್ಲು ಬಂಡೆಗಳೆಡೆಯಲ್ಲಿ ಜಾಗ್ರತೆಯಾಗಿ ಕಾಲಿರಿಸಬೇಕು.

### ತ್ಯಾಜ್ಯರಹಿತ ತಾಣ

ಕೂಡ್ಲು ತೀರ್ಥ ತಿಂಡಿ ತಿಂದು, ಪ್ಲಾಸ್ಟಿಕ್ ಮತ್ತು ಇತರ ತ್ಯಾಜ್ಯ ಎಸೆಯುವ ತಾಣವಲ್ಲ. ವಾಹನ ನಿಂತ ಸ್ಥಳದಿಂದ ಮೇಲಕ್ಕೇರಲು ಅನುಮತಿ ಬೇಕು. ತಿಂಡಿ ಪೊಟ್ಟಣಗಳನ್ನು ಕೊಂಡೊಯ್ಯುವಂತಿಲ್ಲ. ನೀರಿನ ಬಾಟಲ್ ಕೊಂಡೊಯ್ಯುತ್ತಿದ್ದಲ್ಲಿ ಒಂದು ಬಾಟಲಿಗೆ ರೂ.೫೦ ಠೇವಣಿ ಇಡಬೇಕು. ನೀರು ಕುಡಿದು ಆ ಖಾಲಿ ಬಾಟಲ್ ಮತ್ತೆ ತಂದು ತೋರಿಸಿದಲ್ಲಿ ಮಾತ್ರ ಆ ೫೦ ರೂಪಾಯಿ ಹಿಂದಿರುಗಿಸುತ್ತಾರೆ. ಬೆಟ್ಟವೇರುವ ದಾರಿಯಲ್ಲಿ ಎಲ್ಲೂ ಪ್ಲಾಸ್ಟಿಕ್ ತ್ಯಾಜ್ಯ , ಬಾಟಲ್, ಬಟ್ಟೆ ಬರೆ ಯಾವುದೂ ಕಂಡು ಬರಲಿಲ್ಲ. ಇತ್ತೀಚೆಗೆ ನಾನು ಕಂಡ ಪಿಕ್ನಿಕ್ ತಾಣಗಳಲ್ಲಿ ಅತ್ಯಂತ ಸ್ವಚ್ಛ ತಾಣವಿದು ಎನ್ನಿಸಿತು.

